ತೈರೊಳ್ಳಿ ಮಂಜುನಾಥ ಉಡುಪ

# ಒಂದು ವಿದ್ಯೆ



ಒಂದಾನೊಂದು ಕಾಲದ ದೊಡ್ಡ, ದಟ್ಟ ಕಾಡು ಅದು. ಆ ಕಾಡಿನಲ್ಲಿ ಹಲವಾರು ಪ್ರಾಣಿ ಪಕ್ಷಿಗಳಿದ್ದುವು. ಅಲ್ಲಿ ಬೆಕ್ಕು ಮತ್ತು ನಾಯಿಗಳೂ ಇದ್ದವು. ಅವು ಪರಸ್ಪರ ಗೆಳೆಯರಾಗಿದ್ದವು. ಬೆಕ್ಕು ಬಹಳ ಚೂಟಿಯಾಗಿದ್ದ ಕಾರಣ ನಾಯಿ ಬೆಕ್ಕಿನ ಶಿಷ್ಯತ್ವ ಸ್ವೀಕರಿಸುವ ಮನಸ್ಸು ಮಾಡಿತು.

‘ನನಗೆ ನಿನ್ನ ಶಿಷ್ಯನಾಗುವ ಆಸೆ ಉಂಟಾಗಿದೆ. ನಿನಗೆ ಗೊತ್ತಿರುವಂತಹ ವಿದ್ಯೆಗಳನ್ನೆಲ್ಲ ನನಗೆ ಕಲಿಸು’ ಎಂದು ನಾಯಿ ಕೇಳಿಕೊಂಡಿತು. ‘ಆಗಲಿ, ನನಗೆ ಗೊತ್ತಿರುವ ಎಲ್ಲ ವಿದ್ಯೆಗಳನ್ನು ನಿನಗೆ ಕಲಿಸಿ ಕೊಡುತ್ತೇನೆ’ ಎಂದು ಬೆಕ್ಕು ಒಪ್ಪಿಕೊಂಡಿತು.

ಆ ಕಾಲದಲ್ಲಿ ನಾಯಿಗೆ ಬೇಟೆಯಾಡುವ ವಿದ್ಯೆ ತಿಳಿದಿರಲಿಲ್ಲ. ಹೀಗಾಗಿ ಬೆಕ್ಕು ನಾಯಿಗೆ ಬೇಟೆಯಾಡುವ ವಿದ್ಯೆಯನ್ನು ಕಲಿಸಿ ಕೊಡಲಾರಂಭಿಸಿತು. ಚತುರ ಬೇಟೆಗಾರನನ್ನಾಗಿ ಮಾಡಲು ನಾಯಿಗೆ ದಿನಾಲೂ ಬೇಟೆಯ ಹಲವು ತಂತ್ರಗಳನ್ನು ಹೇಳಿ ಕೊಟ್ಟಿತು.

ಇದಾದ ಬಳಿಕ ನಾಯಿ ಉತ್ತಮ ಬೇಟೆಗಾರನಾಗಿ ರೂಪುಗೊಂಡಿತು. ಅದು ಚತುರ ಬೇಟೆಗಾರನೆಂದು ಗುರುತಿಸಿಕೊಂಡಿತು.